ಚಿಕ್ಕಮ್ಮನ ಪ್ರೀತಿ ಎಂತಹದೆಂಬುದನ್ನು ಎಂದಿಗೂ ಮರೆಯಲಾಗದು. ಕೆಳಜಾತಿಯವರನ್ನು ಚಿಕ್ಕಮ್ಮ ಎಂದಿಗೂ ನಿಕೃಷ್ಟರೆಂಬಂತೆ ಕಂಡದ್ದಿಲ್ಲ. ದೂಲೇ, ಬಾಗ್ದಿ, ಬಾರುಯಿ, ಡೋಮ್ ಜಾತಿಯ ಜನರೆಲ್ಲ ಚಿಕ್ಕಮ್ಮನ ಮನೆಗೆ ಯಾವುದೇ ಸಂಕೋಚವಿಲ್ಲದೆ ಬಂದುಹೋಗಿ ಮಾಡುತ್ತಿದ್ದರು. ಎಲ್ಲರೂ ಯಾವುದೋ ಕೆಲಸಕ್ಕಾಗಿ ಮಾತ್ರವೇ ಅವರ ಮನೆಗೆ ಹೋಗುತ್ತಿದ್ದರು ಎಂದು ಹೇಳಲಾಗದು, ಅವರ ಪ್ರೀತಿಯ ಸೆಳೆತದಿಂದಾಗಿ ಹೋಗುತ್ತಿದ್ದರು ಎನ್ನಬೇಕು. ಆ ಕಾಲದಲ್ಲಿ ಬ್ರಾಹ್ಮಣರ ಮನೆಯ ಚಾವಣಿ ಕೆಳಗೆ ಹೋಗಲು ನಮಗೆ ಅಧಿಕಾರವಿರಲಿಲ್ಲ. ಜಯರಾಮಬಾಟಿಯ ಬ್ರಾಹ್ಮಣರು ಕೂಡ ನಮಗಿಂತ ನೂರು ಕೈಯಳತೆ ದೂರವೇ ಇರುತ್ತಿದ್ದರು. ಆ ಕಾಲದಲ್ಲಿ ಜಯರಾಮಬಾಟಿಯಲ್ಲಿ ಚಿಕ್ಕಮ್ಮನ ಬಳಿಗೆ ಹೋಗಲು ನಮಗೆ ಯಾವುದೇ ಅಡೆತಡೆಯಿಲ್ಲದೆ ಅಧಿಕಾರ ಲಭಿಸಿತು. ಚಿಕ್ಕಮ್ಮ ನಮ್ಮ ತಲೆಯಮೇಲೆ ಕೈಯಿಟ್ಟು ಆಶೀರ್ವಾದ ಮಾಡುತ್ತಿದ್ದರು. ಕೆಳಜಾತಿಯವರಿಗೆ ತಮ್ಮ ಕೈಯಿಂದಲೇ ಬಡಿಸಿ ಊಟ ಹಾಕುತ್ತಿದ್ದರು; ಅಷ್ಟೇಕೆ, ಅವರ ಎಂಜಲನ್ನೂ ತಾವೇ ಎತ್ತಿ ಸ್ವಚ್ಛಗೊಳಿಸುತ್ತಿದ್ದರು. ಅದಕ್ಕಾಗಿ ಗ್ರಾಮದ ಮುಖಂಡರು, ಬ್ರಾಹ್ಮಣರು ಹಲವು ಬಾರಿ ಅವರನ್ನು ಜಾತಿಭ್ರಷ್ಟರನ್ನಾಗಿ ಮಾಡುವುದಾಗಿ ಹೆದರಿಸಿದ್ದರು; ದಂಡ ವಿಧಿಸಿದ್ದರು. ಆದರೆ ಚಿಕ್ಕಮ್ಮ ಅದಾವುದನ್ನೂ ಗಣನೆಗೆ ತೆಗೆದುಕೊಳ್ಳಲಿಲ್ಲ. ಅವರು ನಮ್ಮಂತೆ ಸಾಮಾನ್ಯ ಮನುಷ್ಯರಾಗಿರಲಿಲ್ಲ. ಅವರದ್ದೆಲ್ಲವೂ ಬೇರೆಯೇ ರೀತಿಯಾಗಿತ್ತು.

ಚಿಕ್ಕಮ್ಮ ಒಂದೆರಡು ಬಾರಿ ಏನೋ ಸಾಮಾನು ಕೊಂಡುಕೊಳ್ಳಲು ಹಳದಿ ಗ್ರಾಮಕ್ಕೆ ಬಂದಿದ್ದುದನ್ನು ನಾನು ಕಂಡಿದ್ದೇನೆ. ಅವರು ಪಲ್ಲಕ್ಕಿಯಲ್ಲಿ ಬಂದಿದ್ದರು. ಆ ದಿನಗಳಲ್ಲಿ ಹಳದಿ ಗ್ರಾಮದಲ್ಲೇ ರಾಮಕುಮಾರ್ ಜೂಯಿ ಅವರ ಕಿರಾಣಿ ದೊಡ್ಡ ಅಂಗಡಿಯಿತ್ತು – ಅದೇ ರೀತಿ ಉಪೇಂದ್ರ ಜೂಯಿ ಅವರ ಜವುಳಿ ಅಂಗಡಿಯೂ ಇತ್ತು. ಚಿಕ್ಕಮ್ಮನೊಂದಿಗೆ ಒಬ್ಬರೋ ಇಬ್ಬರೋ ಮಹಿಳೆಯರು ಇರುತ್ತಿದ್ದರು. ಹಳದಿಗೆ ಬಂದಾಗ ಅವರು ಅಲ್ಲಿನ ಕಾಳೀಮಂದಿರದಲ್ಲಿ ಕುಳಿತುಕೊಳ್ಳುತ್ತಿದ್ದರು. ಚಿಕ್ಕಮ್ಮನೊಂದಿಗೆ ಬಂದ ಹೆಂಗಸರೂ ಅದೇ ಅಂಗಡಿಯಿಂದ ಸಾಮಾನುಗಳನ್ನು ಕೊಂಡುಕೊಳ್ಳುತ್ತಿದ್ದರು. ಮೊದಲಲ್ಲಿ , ಕಲ್ಕತ್ತಾದಿಂದ ಹಠಾತ್ತನೆ ಭಕ್ತರುಗಳು ಬಂದು, ಅಲ್ಲೇ ತಂಗಿದಾಗ ಚಿಕ್ಕಮ್ಮ ಒಬ್ಬರೋ ಇಬ್ಬರೋ ಕೆಲಸದ ಹೆಂಗಸರನ್ನು ಕರೆದುಕೊಂಡು ಹಳದಿ ಅಥವಾ ಇನ್ನೆಲ್ಲಿಗಾದರೂ ಹೋಗಿ ಸಾಮಾನು, ತರಕಾರಿ ಇತ್ಯಾದಿಗಳನ್ನು ಖರೀದಿಸುತ್ತಿದ್ದರು – ಎಂದು ನಾನು ಕೇಳಿದ್ದೇನೆ. ಚಿಕ್ಕಮ್ಮ ಹಳದಿ ಗ್ರಾಮದ ಕಾಳೀಮಂದಿರದಲ್ಲಿ ಬಂದು ಕುಳಿತುಕೊಂಡಾಗ, ಹಳ್ಳಿಯ ಚಿಕ್ಕ ಮಕ್ಕಳು ಹಾಗೂ ಹಿರಿಯರು ಅಲ್ಲಿ ಬಂದು ಸೇರಿಬಿಡುತ್ತಿದ್ದರು. ಚಿಕ್ಕಮ್ಮ ಎಲ್ಲರ ಜೊತೆಗೆ ಸಹಜವಾಗಿಯೇ ಬೆರೆಯುತ್ತಿದ್ದರು. ಜಗದ್ಧಾತ್ರೀ ಪೂಜೆಯ ಸಮಯದಲ್ಲಿ ಪೂಜೆ ನೋಡಲು, ಪ್ರಸಾದ ಸ್ವೀಕರಿಸಲು ಜಯರಾಮಬಾಟಿಗೆ ಬನ್ನಿ ಎಂದು ಚಿಕ್ಕಮ್ಮ ಎಲ್ಲ ರಿಗೂ ಆಹ್ವಾನಿಸುತ್ತಿದ್ದರು.

ಆಗಿನ ಕಾಲದಲ್ಲಿ ಪಶ್ಚಿಮ ಭಾಗದಿಂದ ಸ್ತ್ರೀ–ಪುರುಷ ಕೂಲಿಗಳು ಈ ಪ್ರದೇಶಕ್ಕೆ ಬರುತ್ತಿದ್ದರು ಎಂದು ನನ್ನ ತಂದೆಯಿಂದ ಕೇಳಿದ್ದೇನೆ. ಅವರು ಬೇಸಾಯ ಮಾಡುವಾಗ ಹಾಗೂ ಕೊಯ್ಲಿನ ಸಮಯದಲ್ಲಿ ಹೊಲದಲ್ಲಿ ಕೆಲಸ ಮಾಡುತ್ತಿದ್ದರು. ಊರ ಹೊರಗೆ ಅವರು ತಿಂಗಳುಪೂರ್ತಿ ಗುಡಿಸಲು ಕಟ್ಟಿ ಅಲ್ಲಿ ವಾಸ ಮಾಡುತ್ತಿದ್ದರು. ಹಗಲಿನ ಕೆಲಸ ಮುಗಿದ ನಂತರ ಅವರಲ್ಲಿ ಹಲವರು ಸಂಜೆಹೊತ್ತು ಚಿಕ್ಕಮ್ಮನ ಮನೆಗೆ ಹೋಗುತ್ತಿದ್ದರು. ಒಂದು ಸಲ ಒಬ್ಬಾಕೆ ಕೆಲಸದವಳಿಗೆ ಹೆರಿಗೆಯಾಗಿತ್ತು. ಮಗುವನ್ನು ಪಕ್ಕದಲ್ಲಿ ಮಲಗಿಸಿ ಆಕೆ ಗದ್ದೆಯಲ್ಲಿ ಧಾನ್ಯ ಒಕ್ಕುವ ಕೆಲಸ ಮಾಡುತ್ತಿದ್ದುದನ್ನು ಕಂಡು ಚಿಕ್ಕಮ್ಮನಿಗೆ ತುಂಬ ಸಂಕಟವೆನಿಸಿತ್ತು. ಅವರು ಆ ಹೆಂಗಸನ್ನು ಬಳಿಗೆ ಕರೆದು, ಅವಳಿಗೆ ಒಂದು ಹೊಸ ಸೀರೆಯನ್ನು ಕೊಟ್ಟರು. ಮಗುವಿಗೋಸ್ಕರ ಅವರ ಚಿಂತೆಗೆ ಕೊನೆಯೇ ಇರಲಿಲ್ಲ. ಕೆಲಸ ಮುಗಿಸಿ ಹೆಣ್ಣು ಗಂಡು ಆಳುಗಳು ಅಲ್ಲಿಂದ ಮರಳಿ ಹೋಗುವಾಗ, ಚಿಕ್ಕಮ್ಮನನ್ನು ಭೇಟಿಯಾಗಿಯೇ ಹೋಗುತ್ತಿದ್ದರು. ಚಿಕ್ಕಮ್ಮ ಅವರಿಗೆಲ್ಲ ಬೆಲ್ಲ, ಕಡಲೆಪುರಿ, ಹಳೆಯ ಬಟ್ಟೆಬರೆ ಇವನ್ನೆಲ್ಲ ನೀಡುತ್ತಿದ್ದರು.

ಚಿಕ್ಕಮ್ಮ ಕೊನೆಯ ಬಾರಿ ಜಯರಾಮಬಾಟಿಯಿಂದ ಹೊರಟು ಕಲ್ಕತ್ತೆಗೆ ಹೋದ ವೇಳೆಗೆ ನನಗೆ ಹತ್ತು ವರ್ಷ ವಯಸ್ಸು. ಚಿಕ್ಕಮ್ಮ ಹೊರಟುನಿಂತ ಚಿತ್ರ ಇಂದಿಗೂ ನನ್ನ ಕಣ್ಣಮುಂದೆ ತೇಲಾಡುತ್ತಿದೆ. ಆಗ ಅವರು ಎಂದಿನಂತೆ ನನ್ನ ತಂದೆಯ ಪಲ್ಲಕ್ಕಿಯಲ್ಲಿ ಶಿಹೋರ್ ಮೂಲಕ ವಿಷ್ಣುಪುರಕ್ಕೆ ಹೋಗಿದ್ದರು. ಅವರೊಂದಿಗೆ ಅವರ ಅಳಿಯಂದಿರು ಇಬ್ಬರು, ಹಾಗೂ ಸೇವಕ ವರದಾ ಮಹಾರಾಜ್ ಇದ್ದರು. ಆಗ ಜಯರಾಮಬಾಟಿಯಿಂದ ಕೋಯಲ್‌ಪಾರಾ – ಕೋತುಲ್‌ಪುರ್‌ಗೆ ಎರಡು ದಾರಿಯ ಮೂಲಕ ಹೋಗಬಹುದಾಗಿತ್ತು. ಒಂದು ದಾರಿ – ಆಮೋದರ ನದಿಯನ್ನು ದಾಟಿ ದೇಶಡಾ ಗ್ರಾಮದ ಮೂಲಕ; ಇನ್ನೊಂದು, ಶಿಹೋರ್– ಶಿರೋಮಣಿಪುರದ ಮೂಲಕ. ಮೊದಲನೆಯ ದಾರಿಯಲ್ಲಿ ದೂರ ಕಡಿಮೆ, ಆದರೆ ರಸ್ತೆ ಕೆಟ್ಟದಾಗಿತ್ತು. ಎರಡನೇ ದಾರಿಯಲ್ಲಿ ದೂರ ಹೆಚ್ಚಾದರೂ ರಸ್ತೆ ಚೆನ್ನಾಗಿತ್ತು. ಈಗ ಎರಡನೇ ರಸ್ತೆ ಬಳಕೆಯಲ್ಲಿಲ್ಲ. ಆಗ ಚಿಕ್ಕಮ್ಮ ಜಯರಾಮಬಾಟಿಯಿಂದ ಪಲ್ಲಕ್ಕಿ ಮೂಲಕ ಹೊರಟಿದ್ದಾಗ ನಮ್ಮ ಗ್ರಾಮದ ಅನೇಕ ಮಂದಿ ಅವರೊಂದಿಗೆ ಶಿಹೋರ್ ತನಕವೂ ಕಳುಹಿಸಿಕೊಡಲು ಹೋಗಿದ್ದರು. ನಾನೂ ಶಿಹೋರ್ ತನಕ ಚಿಕ್ಕಮ್ಮನ ಪಲ್ಲಕ್ಕಿಯ ಹಿಂದೆಯೇ ಹೋಗಿದ್ದೆ. ಶಿಹೋರ್‌ನಲ್ಲಿ ಶಾಂತಿನಾಥ ಮಂದಿರದಲ್ಲಿ ಚಿಕ್ಕಮ್ಮ ಪೂಜೆ ಮಾಡಿ, ಎಲ್ಲರಿಗೂ ಪ್ರಸಾದ ನೀಡಿದರು. ಕೊನೆಯ ಬಾರಿ ಎಂಬಂತೆ ಅವರ ಕೈಯಿಂದ ನಾನೂ ಪ್ರಸಾದ ಸ್ವೀಕರಿಸಿದ್ದೆ. ಬಳಿಕ ಅವರ ಪಲ್ಲಕ್ಕಿ ಕೋಯಲ್‌ಪಾರಾ ಮಾರ್ಗದ ಮೂಲಕ ಹೊರಟಿತು. ಅದೇ ನಾನು ಚಿಕ್ಕಮ್ಮನನ್ನು ಕೊನೆಯ ಬಾರಿ ನೋಡಿದುದು.

ಚಿಕ್ಕಮ್ಮ ದೇಹತ್ಯಾಗ ಮಾಡಿದ ಸುದ್ದಿ ತಿಳಿದು ನಾನು ತುಂಬಾ ಅತ್ತುಬಿಟ್ಟಿದ್ದೆ. ಕಿಶೋರಿ ಮಹಾರಾಜ್ ನಾನು ಅಳುತ್ತಿದ್ದುದನ್ನು